1991ರ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಕೆಳಕಂಡ ವಿಧೇಯಕವನ್ನು ಮಂಡಿಸಿ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಸನ್ಮಾನ್ಯ ಉಪಾಧ್ಯಕ್ಷರೇ, ಇದು ಕೂಡ ಆಯವ್ಯಯಕ್ಕೆ ಪೂರಕವಾದಂತಹ ಒಂದು ವಿಧೇಯಕ ಆಗಿದೆ. ಆದುದರಿಂದ ಈ ಸಭೆ ಮಾನ್ಯತೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "1991ರ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 5ರವರೆಗೆ:

ಉಪಾಧ್ಯಕ್ಷರು: "ಖಂಡ 2ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "1991ರ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶಾಸನಾತ್ಮಕ ನಿರ್ಣಯ

ಉಪಾಧ್ಯಕ್ಷರು: ಈಗ ಒಂದು ಶಾಸನಾತ್ಮಕ ನಿರ್ಣಯ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ಈ ಒಂದು ಶಾಸನಾತ್ಮಕ ನಿರ್ಣಯ ಬಹಳ ಮುಖ್ಯವಾಗಿರತಕ್ಕದ್ದು. ಇದು ಬಾರೋಯಿಂಗ್ ಲಿಮಿಟ್ ಆದರೂ ಇದು ಕೆಇಬಿಗೆ ಸಂಬಂಧಪಟ್ಟಿದ್ದು. ನಾವು ಕೆಇಬಿಯಲ್ಲಿ ಏನು ನಡೆಯುತ್ತಿದೆ, ಅದರ ವ್ಯವಹಾರಗಳು ಏನು ಎಂಬುದನ್ನು ನೋಡಬೇಕು. ಆರು ನೂರು ಕೋಟಿ ರೂಪಾಯಿ

ಆಗಿದೆ. ಒಂದು ಸಾರಿ ಎರಡು ಕೋಟಿ, ಮೂರು ಕೋಟಿ, ಇದ್ದುದು ಆರು ಕೋಟಿ ರೂಪಾಯಿ ಲೋನನ್ನು ಅಟ್ ಎ ಟೈಮ್ ತೆಗೆದುಕೊಳ್ಳುವುದಾದರೆ ಅದರ ವ್ಯವಹಾರ ಸ್ವಲ್ಪ ತಿಳಿದುಕೊಳ್ಳುವುದಕ್ಕೆ ಅನುಕೂಲ ಆಗುತ್ತದೆ. ಆದ್ದರಿಂದ ನಾಳೆ ಇದನ್ನು ತೆಗೆದುಕೊಂಡು ಚರ್ಚೆ ಮಾಡೋಣ.

(ಗೊಂದಲ)

ಉಪಾಧ್ಯಕ್ಷರು: ಈಗ ಸಭೆಯನ್ನು ಮುಂದೂಡಲಾಗಿದೆ. ಸಭೆ ನಾಳೆ ಬೆಳಿಗ್ಗೆ 11 ಗಂಟೆಗೆ ಮತ್ತೆ ಸೇರುತ್ತದೆ.

(ಸದನವು ಸಂಜೆ 5.43ಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ 26ನೇ ಮಾರ್ಚ್ 1991ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಲಿಲ್ಲ ಎಂದು ಸೂಚಿಸುತ್ತದೆ)